ವಿಜಯ ಕರ್ನಾಟಕ
ನಮ್ಮ ಹುಬ್ಬಳ್ಳಿ ಧಾರವಾಡ
ಗುರುವಾರ,24 ಸೆಪ್ಟೆಂಬರ್ 2026
ಇಂದಿನ ತಾಪಮಾನ 23° ಕನಿಷ್ಠ 29° ಗರಿಷ್ಠ
www.vijaykarnataka.com
x.com/vijaykarnataka
facebook.com/vijaykarnataka
www.vijaykarnatakaepaper.com

ಪ್ರೊ.ತೋಫಖಾನೆ ಜನ್ಮ ಶತಮಾನದ ನೆನಪು 26ರಂದು

ಹುಬ್ಬಳ್ಳಿ: ನಾಡಿನ ಹಿರಿಯ ವಿದ್ವಾಂಸ ಹಾಗೂ ಸಾಹಿತಿ ಪ್ರೊ.ಶ್ರೀನಿವಾಸ ತೋಫಖಾನೆ ಅವರ ಜನ್ಮ ಶತಮಾನದ ನೆನಪು ಹಾಗೂ ಅವರ ಗೀತ ರಾಮಾಯಣ ಮರುಮುದ್ರಣದ ಕೃತಿ ಲೋಕಾರ್ಪಣೆ ಕಾರ್ಯಕ್ರಮ ಸೆ.26 ರಂದು ಸಂಜೆ 5.30ಕ್ಕೆ ನಗರದ ಸವಾಯಿ ಗಂಧರ್ವ ಸಭಾ ಭವನದಲ್ಲಿ ನಡೆಯಲಿದೆ ಎಂದು ಸಾಹಿತ್ಯ ಪ್ರಕಾಶನದ ಮುಖ್ಯಸ್ಥ ಎಂ.ಎ.ಸುಬ್ರಹ್ಮಣ್ಯ ತಿಳಿಸಿದರು.

ಗೀತ ಚಿತ್ರ ನೃತ್ಯ ಪ್ರಸ್ತುತಿ

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಹಿತ್ಯ ಪ್ರಕಾಶನ ಹಾಗೂ ಪ್ರೊ.ಶ್ರೀನಿವಾಸ ತೋಫಖಾನೆ ಅವರ ಅಭಿಮಾನಿಗಳು, ಬಂಧುಗಳ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕರ್ನಾಟಕ ಸಂಸ್ಕೃತ ವಿವಿ ಪ್ರಥಮ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಅವರು ಪ್ರೊ.ಶ್ರೀನಿವಾಸ ತೋಫಖಾನೆ: ಸಾಹಿತ್ಯ- ಸಾಧನೆ ಕುರಿತು ಉಪನ್ಯಾಸ ನೀಡುವರು. ಹಿರಿಯ ಲೇಖಕ ಡಾ.ಜಿ.ಬಿ.ಹರೀಶ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು. ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಲ್ಪಟ್ಟ

ಗೀತ ರಾಮಾಯಣ ಕೃತಿಯ ಮರುಮುದ್ರಣವನ್ನು ಲೋಕಾರ್ಪಣೆ ಮಾಡಲಾಗುವುದು. ಇದೇ ವೇಳೆ ಕೃತಿಯ ಭಾಗಗಳನ್ನು ಆಧರಿಸಿ ಗಾಯನ, ನೃತ್ಯ ವಿಶೇಷ ಪ್ರಸ್ತುತಿ ನಡೆಯಲಿದೆ.

ಹುಬ್ಬಳ್ಳಿಯ ಕಲಾ ಸುಜಯದ ಖ್ಯಾತ ನೃತ್ಯ ಪ್ರತಿಭೆ ವಿದ್ವಾನ್ ಸುಜಯ್ ಶಾನಭಾಗ ನೃತ್ಯ ಪ್ರದರ್ಶನ ನೀಡಲಿದ್ದು, ಬೆಂಗಳೂರಿನ ಖ್ಯಾತ ಗಾಯನ ಪ್ರತಿಭೆ ವಿದ್ವಾನ್ ಶ್ರೀ ಹರ್ಷ ಗಾಯನ ಪ್ರಸ್ತುತ ಪಡಿಸಲಿದ್ದಾರೆ. ಯಲ್ಲಾಪುರದ ಖ್ಯಾತ ಚಿತ್ರಕಲಾವಿದ ಸತೀಶ ಅವರು ಚಿತ್ರಕಲೆ ಮೂಲಕ ಗೀತ ರಾಮಾಯಣದ ಪ್ರಸಂಗಗಳಿಗೆ ದೃಶ್ಯರೂಪ ನೀಡಲಿದ್ದಾರೆ ಎಂದರು.

ಯುಪಿಐ, ಡೆಬಿಟ್-ಕ್ರೆಡಿಟ್ ಕಾರ್ಡ್, ಬ್ಯಾಂಕ್ ವರ್ಗಾವಣೆ, ಚೆಕ್ ಮೂಲಕ ಪಾವತಿಗೆ ಆದೇಶ

ನೋ ಕ್ಯಾಶ್ ಓನ್ಲೀ ಡಿಜಿಟಲ್!

■ ವಿಜಯ್ ಹೂಗಾರ ಹುಬ್ಬಳ್ಳಿ
vijay.hugar@timesofindia.com

ಇಲ್ಲಿನ ವಿದ್ಯಾನಗರದಲ್ಲಿರುವ ಸರಕಾರಿ ಸ್ವಾಮ್ಯದ ಪ್ರಿಯದರ್ಶಿನಿ ಪೆಟ್ರೋಲ್ ಬಂಕ್‌ನಲ್ಲಿ ನಗದು ಪಾವತಿ ಬಂದ್ ಮಾಡಿ, ಡಿಜಿಟಲ್ ಪಾವತಿಗೆ ಮಾತ್ರ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಹೊರಡಿಸಿರುವ ಆದೇಶ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸ ಒದಗಿಸಿದೆ.

ಪಾರದರ್ಶಕತೆ, ಡಿಜಿಟಲ್ ಇಂಡಿಯಾಗೆ ಉತ್ತೇಜನ ಎಂಬುದು ನಿಗಮದ ಉದ್ದೇಶವಾದರೂ, ಈ ನಿಲುವು ನೋಟು- ನಾಣ್ಯಗಳೇ ಕಾನೂನುಬದ್ಧ ಹಣ ಎಂಬ ಆರ್‌ಬಿಐ ನಿಯಮಕ್ಕೆ ವಿರುದ್ಧವಾಗಿದೆ. ಸ್ಮಾರ್ಟ್ ಫೋನ್ ಇಲ್ಲದವರು, ಗ್ರಾಮೀಣ ಭಾಗದ ರೈತರು, ವೃದ್ಧರು, ದೂರದ ಊರಿಗೆ ಹೊರಟಿರುವ ಲಾರಿ ಚಾಲಕರ ಗತಿ ಏನು ಎಂಬ ಪ್ರಶ್ನೆ ಎದ್ದಿದೆ.

ಹುಬ್ಬಳ್ಳಿಯ ಪ್ರಧಾನ ಕಚೇರಿಯು 2026, ಸೆ.9ರಿಂದಲೇ ಜಾರಿಗೆ ತಂದ ನಗದು ಬಂದ್ ಆದೇಶದಲ್ಲಿ ಯುಪಿಐ, ಡೆಬಿಟ್ -ಕ್ರೆಡಿಟ್ ಕಾರ್ಡ್, ಬ್ಯಾಂಕ್ ವರ್ಗಾವಣೆ ಇಲ್ಲವೇ ಚೆಕ್ ಮೂಲಕವೇ ಪಾವತಿಸಬೇಕು ಎಂದು ಹೇಳಲಾಗಿದೆ. ಅಲ್ಲದೇ ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಅಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೂ ಸೂಚಿಸಲಾಗಿದೆ. ಆದರೆ, ಆದೇಶದ ಬಗ್ಗೆ ಗೊತ್ತಿಲ್ಲದೇ ಪೆಟ್ರೋಲ್ ತುಂಬಿಸಲು ಬಂಕ್‌ಗೆ ಹೋದರೆ, 'ನಮ್ಮ ಬಂಕ್‌ನಲ್ಲಿ ಹಣ ತೆಗೆದುಕೊಳ್ಳುವುದಿಲ್ಲ, ಫೋನ್‌ಪೇ, ಗೂಗಲ್ ಪೇ ಮೂಲಕ ಹಣ ಹಾಕಿ, ಇಲ್ಲವೇ ಚೆಕ್ ನೀಡಿ. ಅಂದಾಗ ಮಾತ್ರ ಪೆಟ್ರೋಲ್ ಮತ್ತು ಡಿಸೇಲ್ ಹಾಕುತ್ತೇವೆ' ಎಂದು ಅಲ್ಲಿನ ಸಿಬ್ಬಂದಿ ಹೇಳುತ್ತಾರೆ. ಈ ಬಗ್ಗೆ ಗೊತ್ತಿಲ್ಲದೇ ಬಂಕ್‌ಗೆ ಹೋದ ವಾಹನ ಸವಾರರು, ಡಿಜಿಟಲ್ ಪೇಮೆಂಟ್ ಸಾಧ್ಯವಾಗದೇ ಪೆಟ್ರೋಲ್ ಹಾಕಿಸಿಕೊಳ್ಳದೇ ವಾಪಸ್ ಹೋಗುವುದು ಸಾಮಾನ್ಯ ಎನ್ನುವಂತಾಗಿದೆ.

ಒಳ್ಳೆಯ ಉದ್ದೇಶ, ಆದರೆ.!: ಡಿಜಿಟಲ್ ಪೇಮೆಂಟ್‌ನಿಂದ ನಗದು ನಿರ್ವಹಣೆ ಕಡಿಮೆಯಾಗುತ್ತದೆ, ಕಳ್ಳತನ ತಪ್ಪುತ್ತದೆ, ಪ್ರತಿ ಲೀಟರ್ ಮಾರಾಟದ ಲೆಕ್ಕ ಸಿಗುತ್ತದೆ ಎಂಬುದು ನಿಗಮದ ವಾದ. ನಿಗಮದ ಉದ್ದೇಶ ಒಳ್ಳೆಯದೇ ಆಗಿದ್ದರೂ, ವಾಸ್ತವದಲ್ಲಿ ಇದರ ಅನುಷ್ಠಾನ ಕಾರ್ಯ ಸಾಧು ಆಗಲು ಸಾಧ್ಯವೇ? ಏಕೆಂದರೆ ಗ್ರಾಮೀಣ ಪ್ರದೇಶದ ಬಹುತೇಕರು, ಅದರಲ್ಲೂ ರೈತರ ಬಳಿ ಸ್ಮಾರ್ಟ್ ಫೋನ್ ಇರುವುದಿಲ್ಲ, ಇದ್ದರೂ, ಡಾಟಾ, ನೆಟ್‌ವರ್ಕ್ ಸಮಸ್ಯೆ ಇರುತ್ತದೆ. ಎರಡೂ ಇದ್ದರೂ ಡಿಜಿಟಲ್ ವ್ಯಾಲೆಟ್‌ನಲ್ಲಿ ಹಣ ಇರುವುದಿಲ್ಲ, ಜೇಬಿನಲ್ಲಿ ದುಡ್ಡಿದ್ದವರೂ ಪೆಟ್ರೋಲ್ ಹಾಕಿಸಿಕೊಳ್ಳಲಾಗದ ಸ್ಥಿತಿ ಬಂದರೆ ಏನು ಮಾಡಬೇಕು? ಎಂಬ ಪ್ರಶ್ನೆ ಉದ್ಭವವಾಗಿದೆ.

ಆರ್‌ಬಿಐ ಮಾರ್ಗಸೂಚಿ ಏನು?: ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಾರ ಸಂಸ್ಥೆಯಿಂದ ಮುದ್ರಿಸಿರುವ ನೋಟುಗಳು ಮತ್ತು ನಾಣ್ಯಗಳು ಕಾನೂನು ಬದ್ಧವಾಗಿರುತ್ತವೆ. ಆ ಹಣವನ್ನು ನಿರಾಕರಿಸುವಂತಿಲ್ಲ. ಅಲ್ಲದೇ ಈ ಹಿಂದೆ ಬ್ಯಾಂಕ್ ಸೇರಿದಂತೆ ಕೆಲ ಸಂಸ್ಥೆ ಗಳು ನಿರ್ದಿಷ್ಟ ಮುಖಬೆಲೆಯ ನೋಟುಗಳನ್ನು ಸ್ವೀಕರಿಸುತ್ತಿಲ್ಲ ಎಂಬ ದೂರು ಬಂದಾಗ ಆರ್‌ಬಿಐ ಸುತ್ತೋಲೆ ಹೊರಡಿಸಿ ಸರಕಾರಿ, ಖಾಸಗಿ ಸಂಸ್ಥೆಗಳು, ವ್ಯಕ್ತಿಗಳು ಇಂತಹ ನಿರ್ಬಂಧಿತ ಕ್ರಮಗಳನ್ನು ಕೈಬಿಡಬೇಕು ಎಂದು ಹೇಳಿದೆ.

ಇತ್ತೀಚೆಗೆ ಅಹ್ಮದಾಬಾದ್‌ನ ಮಲ್ಟಿಪ್ಲೆಕ್ಸ್‌ನಲ್ಲಿ ನಗದು ನಿರಾಕರಿಸಿದ ಪ್ರಕರಣದಲ್ಲಿ ವಕೀಲರೊಬ್ಬರು ಕಾನೂನು ನೋಟಿಸ್ ನೀಡಿದ್ದರಲ್ಲದೇ, ನಗದು ನಿರಾಕರಣೆ ಗ್ರಾಹಕ ಹಕ್ಕುಗಳ ಉಲ್ಲಂಘನೆಯಾಗಲಿದೆ. ಸ್ಮಾರ್ಟ್ ಫೋನ್ ಇಲ್ಲದವರು ಸೇವೆ ಖರೀದಿಸುವುದು ಹೇಗೆ? ಎಂದು ಪ್ರಶ್ನಿಸಿದ್ದರು. ಗ್ರಾಹಕರಿಂದ ನಾಣ್ಯ-ನೋಟು ನಿರಾಕರಿಸುವುದು ಕಾನೂನುಬಾಹಿರ ಮತ್ತು ನಗದು ನಿರಾಕರಣೆ ಕುರಿತು ಆರ್‌ಬಿಐಗೆ ದೂರು ನೀಡಲು ಪ್ರತಿಯೊಬ್ಬರಿಗೂ ಹಕ್ಕಿದೆ ಎನ್ನುವುದನ್ನು ಆರ್‌ಬಿಐ ನಿಯಮ ಸ್ಪಷ್ಟಪಡಿಸುತ್ತದೆ.

ಕಾನೂನು ತಜ್ಞರ ಮಾತು: ಸರಕಾರಿ ನಿಗಮವೇ ಕಾನೂನುಬದ್ಧ ನೋಟು ಸ್ವೀಕರಿಸುವುದಿಲ್ಲ ಎನ್ನುವುದು ಸರಿಯಲ್ಲ. ಡಿಜಿಟಲ್‌ಗೆ ಪ್ರೋತ್ಸಾಹ ನೀಡುವುದು ತಪ್ಪಲ್ಲ. ಆದರೆ ನಗದನ್ನು ಐಚ್ಛಿಕ ಆಯ್ಕೆಯಾಗಿ ಇಡಬೇಕು. ಸಂಪೂರ್ಣ ನಗದು ನಿಷೇಧ ಗ್ರಾಹಕ ಸಂರಕ್ಷಣಾ ಕಾಯ್ದೆಯಡಿ ಸೇವಾ ನಿರಾಕರಣೆ ಆಗುತ್ತದೆ. ಇದು ಜನಪರ ನಿಲುವಲ್ಲ ಎಂದು ಹಿರಿಯ ವಕೀಲ ಪರಶುರಾಮ ಅಗಡಿ ಅಭಿಪ್ರಾಯ ಪಟ್ಟಿದ್ದಾರೆ.

ಜನಪರ ಹೇಗಾಗಬೇಕು?: ಡಿಜಿಟಲ್‌ಗೆ ಶೇ.2 ರಿಯಾಯಿತಿ ಕೊಟ್ಟು ಪ್ರೋತ್ಸಾಹಿಸಿ, ನಗದನ್ನೂ ಮುಂದುವರಿಸಬಹುದು. ಇಲ್ಲವೇ ಬಂಕ್‌ನಲ್ಲಿಯೇ ಹಣ ನೀಡಿದಾಗ ಅದರ ಬದಲು ಡಿಜಿಟಲ್ ಪೇಮೆಂಟ್ ವ್ಯವಸ್ಥೆ ಅಳವಡಿಸಬೇಕು. ಡಿಜಿಟಲ್ ಭವಿಷ್ಯದ ದಾರಿ ನಿಜ, ಆದರೆ ದೇಶದ ಶೇ.100ರಷ್ಟು ಜನರು ಡಿಜಿಟಲ್ ಆಗುವವರೆಗೆ ನೋಟು-ನಾಣ್ಯವೇ ನಿಜವಾದ ಹಣವಾಗಿದೆ. ಸರಕಾರಿ ಸಂಸ್ಥೆಯೇ ನಗದು ಬೇಡ ಎಂದರೆ ಅದು ಡಿಜಿಟಲ್ ಕ್ರಾಂತಿಯಲ್ಲ, ಜನಸಾಮಾನ್ಯರ ದೈನಂದಿನ ಸಂಚಾರಕ್ಕೆ ತೊಡಕಾಗಲಿದೆ. ಅದಕ್ಕಾಗಿ ಕೂಡಲೇ ಆದೇಶವನ್ನು ಹಿಂಪಡೆಯಬೇಕು ಎಂಬುದು ಪ್ರಜ್ಞಾವಂತರ ಒತ್ತಾಯ.

ಹುಬ್ಬಳ್ಳಿ ಪ್ರಿಯದರ್ಶಿನಿ ಪೆಟ್ರೋಲ್ ಬಂಕ್.

ನೋಟು, ನಾಣ್ಯ ನಿರಾಕರಣೆ ಆರ್‌ಬಿಐ ನಿಯಮಕ್ಕೆ ವಿರುದ್ಧ

ಸರಕಾರಿ ಸ್ವಾಮ್ಯದ ಪೆಟ್ರೋಲ್ ಬಂಕ್‌ನಲ್ಲಿ ಹೊಸ ನಿಯಮ


CIN : U01820KA1975SGC002883 GSTIN : 29AABCT3801E1ZN
ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
Karnataka Handloom Development Corporation Ltd.,
(A Government of Karnataka Undertaking)
Ref: KHDC/H.O/MD/2026-27/ 09-09-2026
ಕಛೇರಿ ಆದೇಶ
Head Office : Priyadarshini Nekar Bhavan, 1st Floor, Opp. K. H. Patil College, Nekar Colony, Vidyanagar, Hubballi - 580 031
Phone : 2277504, 511, Fax : 0836 - 2277506 / 2277510

ಕೆಎಚ್‌ಡಿಸಿ ಆದೇಶದ ಪ್ರತಿ.


NO CASH PAYMENTS
ONLY DIGITAL PAYMENTS
ARE ACCEPTED HERE.
(UPI, ATM CARDS &
CHEQUES)

ಪೆಟ್ರೋಲ್ ಬಂಕ್‌ನಲ್ಲಿ ಹಾಕಿದ ನೋಟಿಸ್.

> ವ್ಯವಹಾರಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಹೆಚ್ಚಿಸುವುದು, ಮಾರಾಟ ಮತ್ತು ಸ್ವೀಕೃತಿಗಳ ಸಮರ್ಪಕ ಲೆಕ್ಕಪತ್ರ ನಿರ್ವಹಣೆ ಹಾಗೂ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಉತ್ತೇಜಿಸುವ ಉದ್ದೇಶದಿಂದ ನಿಗಮದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಪ್ರಿಯದರ್ಶಿನಿ ಫ್ಯೂಯಲ್ಸ್ (ಪೆಟ್ರೋಲ್ ಬಂಕ್)ನಲ್ಲಿ ನಗದು ವ್ಯವಹಾರ ಬಂದ್ ಮಾಡಲಾಗಿದೆ. ಪೆಟ್ರೋಲ್ ಬಂಕ್‌ನ ಪ್ರಮುಖ ಸ್ಥಳಗಳಲ್ಲಿ ಸೂಚನಾ ಫಲಕಕ್ಕೂ ಆದೇಶ ಪ್ರತಿ ಅಂಟಿಸಲಾಗಿದೆ. ಡಿಜಿಟಲ್ ಪಾವತಿಯಲ್ಲಿ ಯಾವುದೇ ತೊಂದರೆ ಬಂದರೆ ತಕ್ಷಣ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದು ಸಿಬ್ಬಂದಿಗೆ ಸೂಚಿಸಲಾಗಿದೆ.
>
> **-ವ್ಯವಸ್ಥಾಪಕ ನಿರ್ದೇಶಕರು,** ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ

> ಡಿಜಿಟಲ್ ಪೇಮೆಂಟ್ ಉತ್ತೇಜನ ಒಳ್ಳೆಯ ಬೆಳವಣಿಗೆ. ಆದರೂ ನಗದು ನಿರಾಕರಣೆ ಮಾಡುವಷ್ಟು ಡಿಜಿಟಲ್ ಬೆಳವಣಿಗೆ ನಮ್ಮಲ್ಲಿಲ್ಲ. ಇನ್ನೂ ನಗದು ಬಳಸುವ ಜನರು ಹೆಚ್ಚಾಗಿರುವುದರಿಂದ ನಿಗಮವು ನಗದು ಬಂದ್ ಮಾಡಿರುವುದು ಸರಿಯಲ್ಲ. ಈ ಕುರಿತು ತಕ್ಷಣವೇ ನಗದು ನಿರಾಕರಣೆ ನಿಲುವನ್ನು ಹಿಂಪಡೆಯಬೇಕು.
>
> **-ಮನೋಜ ಅಂಗಡಿ,** ವಾಹನ ಸವಾರ, ಹುಬ್ಬಳ್ಳಿ

ವಿಕ ಗಣೇಶ ಮೂರ್ತಿ ಸ್ಪರ್ಧೆ

ಬಹುಮಾನ ವಿತರಣೆ ಇಂದು

ಹುಬ್ಬಳ್ಳಿ: ವಿಜಯ ಕರ್ನಾಟಕ ಪತ್ರಿಕೆಯು ಶ್ರೀ ದುರ್ಗಾ ಡೆವಲಪರ್ಸ್ ಹಾಗೂ ಪ್ರಮೋಟರ್ಸ್ ಸಹಯೋಗದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ 'ವಿಕ ಗಣೇಶ ಮೂರ್ತಿ ಸ್ಪರ್ಧೆ'ಯನ್ನು ಆಯೋಜಿಸಿತ್ತು. ಇದರಂಗವಾಗಿ ಸೆ.24ರಂದು ಬೆಳಗ್ಗೆ 10.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಗರದ ಶ್ರೀ ಮೂರು ಸಾವಿರಮಠದ ಆವರಣದ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಗಣೇಶ ಮಂಡಳಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ವಿಜಯ ಕರ್ನಾಟಕವು ಪ್ರತಿವರ್ಷ ಗಣೇಶೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸುತ್ತಿದೆ. ಈ ವರ್ಷವೂ ಆಯೋಜಿಸಿದ್ದ ಗಣೇಶ ಮೂರ್ತಿ ಸ್ಪರ್ಧೆಯಲ್ಲಿ ಹುಬ್ಬಳ್ಳಿ-ಧಾರವಾಡ ಅವಳಿ ನಗರದ ನೂರಾರು ಗಣೇಶೋತ್ಸವ ಮಂಡಳಿಯವರು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು. ಪ್ರಶಸ್ತಿಗೆ ಆಯ್ಕೆಯಾದ ಗಣೇಶ ಮಂಡಳಿಗಳಿಗೆ ಸೆ.24, ಗುರುವಾರ ಬಹುಮಾನ ವಿತರಿಸಲಾಗುತ್ತದೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಬರ್ಟ್ ದದ್ದಾಪುರಿ ಉದ್ಘಾಟಿಸುವರು. ಶ್ರೀ ದುರ್ಗಾ ಗ್ರೂಪ್ ಆಫ್ ಕಂಪನೀಸ್‌ನ ವ್ಯವಸ್ಥಾಪಕ ನಿರ್ದೇಶಕ ವೀರೇಶ ಉಂಡಿ ಅಧ್ಯಕ್ಷತೆ ವಹಿಸುವರು. ಉದ್ಯಮಿ ಹಾಗೂ ಬಿಜೆಪಿ ಮುಖಂಡ ಗೋವಿಂದ ಜೋಶಿ, ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರೇಟ್‌ನ ಆಯುಕ್ತ ಭೂಷಣ್ ಬೊರಸೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಜತ ಉಳ್ಳಾಗಡ್ಡಿಮಠ ಹಾಗೂ ವಿಶ್ವ ಹಿಂದು ಪರಿಷತ್ ಮುಖಂಡ ಸಂಜಯ ಬಡಸ್ಕರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

29ರಂದು ರೈತರ ಪ್ರತಿಭಟನೆ

■ ವಿಕ ಸುದ್ದಿಲೋಕ ಧಾರವಾಡ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಧಾರವಾಡ ಜಿಲ್ಲಾ ಘಟಕದ ನೇತೃತ್ವದಲ್ಲಿ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆ.29ರಂದು ಬೆಳಗ್ಗೆ 11ಕ್ಕೆ ನಗರದ ಜ್ಯುಬಿಲಿ ವೃತ್ತದಲ್ಲಿ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಫಾರೂಖ ಕಿಲ್ಲೇದಾರ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧಾರವಾಡ, ಅಳ್ನಾವರ, ಕಲಘಟಗಿ ಹಾಗೂ ಕುಂದಗೋಳ ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಬೇಕು. ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸುವ ಜತೆಗೆ ಕಬ್ಬು ಸಾಗಣೆ ವೆಚ್ಚವನ್ನು ಕಾರ್ಖಾನೆಗಳೇ ಭರಿಸ ಬೇಕು. ಎಫ್‌ಆರ್‌ಪಿ ವ್ಯವಸ್ಥೆ ಯಲ್ಲಿ ಅಗತ್ಯ ತಿದ್ದುಪಡಿ ಮಾಡಿ ರೈತರಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಮಾಡಬೇಕು ಎಂದರು.

ರೈತರಿಗೆ ಪ್ರತಿದಿನ ಏಳು ಗಂಟೆ ನಿರಂತರ ವಿದ್ಯುತ್ ಪೂರೈಸಬೇಕು. ರಾತ್ರಿ ನೀಡುವ ವಿದ್ಯುತ್‌ನ್ನು ಹಗಲಿನಲ್ಲೇ ನೀಡುವ ವ್ಯವಸ್ಥೆ ಮಾಡಬೇಕು.

ಬ್ಯಾಂಕ್‌ಗಳಲ್ಲಿನ ರೈತರ ಎಲ್ಲ ರೀತಿಯ ಸಾಲಗಳನ್ನು ಮನ್ನಾ ಮಾಡಬೇಕು ಹಾಗೂ ರೈತರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆಯಬೇಕು. ಬೆಳೆ ವಿಮೆಯ ಹಣವನ್ನು ಕೂಡಲೇ ರೈತರ ಖಾತೆಗಳಿಗೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಎರಡು ವರ್ಷಗಳಿಂದ ರಾಸಾಯನಿಕ ಗೊಬ್ಬರಗಳ ಕೊರತೆ ಹಾಗೂ ಬೆಲೆ ಏರಿಕೆಯಿಂದ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಗೊಬ್ಬರಗಳ ಸಮರ್ಪಕ ಪೂರೈಕೆ ಖಚಿತಪಡಿಸುವ ಜತೆಗೆ, ಕೃತಕ ಕೊರತೆ ಹಾಗೂ ಅನಗತ್ಯ ಲಿಂಕ್ ಪದ್ಧತಿಯನ್ನು ತಕ್ಷಣವೇ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾರುತಿ ಸುಂಕದ, ನಿಂಗಪ್ಪ ಮಾಧಾನಭಾವಿ ಸೇರಿದಂತೆ ಇತರರು ಇದ್ದರು.

ಬರಪೀಡಿತ ತಾಲೂಕುಗಳ ಘೋಷಣೆಗೆ ಆಗ್ರಹ

ಸಮಸ್ಯೆಗೆ ಸ್ಪಂದಿಸದಿದ್ದರೆ ಹೋರಾಟ ತೀವ್ರ

ಕೆಆರ್‌ಎಸ್ ಪಕ್ಷದ ಬೃಹತ್ ಪ್ರತಿಭಟನಾ ಸಮಾವೇಶ,ಧರಣಿ

■ ವಿಕ ಸುದ್ದಿಲೋಕ ಧಾರವಾಡ

ಸರಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ, ಸಾರ್ವಜನಿಕರ ಕೆಲಸಗಳಿಗೆ ಆಗುತ್ತಿರುವ ವಿಳಂಬ ಹಾಗೂ ಮೂಲಸೌಕರ್ಯಗಳ ಕೊರತೆ ನಿವಾರಣೆಗೆ ಆಗ್ರಹಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾ ರೆಡ್ಡಿ ನೇತೃತ್ವದಲ್ಲಿ ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನಾ ಸಮಾವೇಶ ಹಾಗೂ ಧರಣಿ ನಡೆಯಿತು.

ಜಿಲ್ಲಾಧಿಕಾರಿ ಕಚೇರಿ ಸೇರಿದಂತೆ ಪ್ರಮುಖ ಸರಕಾರಿ ಇಲಾಖೆಗಳಲ್ಲಿ ಸಾರ್ವಜನಿಕರಿಗೆ ಸಮರ್ಪಕ ಸ್ಪಂದನೆ ದೊರೆಯುತ್ತಿಲ್ಲ, ಹಣ ನೀಡದೆ ಸರಕಾರಿ ಕೆಲಸಗಳು ನಡೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಸರಕಾರ ಹಾಗೂ ಸ್ಥಳೀಯ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರವಿಕೃಷ್ಣಾ ರೆಡ್ಡಿ ಮಾತನಾಡಿ, ಜನಸಾಮಾನ್ಯರು ತಮ್ಮ ಹಕ್ಕು ಹಾಗೂ ಅಗತ್ಯ ಕೆಲಸಗಳಿಗಾಗಿ ಸರಕಾರಿ ಕಚೇರಿಗಳಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ. ಆಡಳಿತ ಯಂತ್ರ ನಿಷ್ಕ್ರಿಯಗೊಂಡಿದ್ದು, ಭ್ರಷ್ಟಾಚಾರಮುಕ್ತ ನಾಡು ನಿರ್ಮಾಣಕ್ಕಾಗಿ ಜನರು ಒಗ್ಗಟ್ಟಾಗಿ ಧ್ವನಿ ಎತ್ತಬೇಕಿದೆ ಎಂದು ಮನವಿ ಮಾಡಿದರು.

ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಹದಗೆಟ್ಟಿರುವ ರಸ್ತೆಗಳ ದುರಸ್ತಿ, ಕುಡಿಯುವ ನೀರಿನ ಸಮಸ್ಯೆ ಪರಿಹಾರ ಹಾಗೂ ಸ್ಥಳೀಯ ಆಡಳಿತದ ನಿರ್ಲಕ್ಷ್ಯಕ್ಕೆ ಕಡಿವಾಣ ಹಾಕಲು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಕೆಆರ್‌ಎಸ್ ಮುಖಂಡರು, ಸಾರ್ವಜನಿಕರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಪಕ್ಷದ ಜಿಲ್ಲಾ ಮಟ್ಟದ ಪದಾಧಿಕಾರಿಗಳು ಹಾಗೂ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾ ರೆಡ್ಡಿ ನೇತೃತ್ವದಲ್ಲಿ ಧಾರವಾಡ ಡಿಸಿ ಕಚೇರಿ ಎದುರು ಬುಧವಾರ ಬೃಹತ್ ಪ್ರತಿಭಟನಾ ಸಮಾವೇಶ ಹಾಗೂ ಧರಣಿ ನಡೆಯಿತು.

ಮಾಸಿಕ ಗೌರವಧನಕ್ಕೆ ಅರ್ಜಿ

ಧಾರವಾಡ: ಕರ್ನಾಟಕ ರಾಜ್ಯದಲ್ಲಿರುವ ನೋಂದಾಯಿತ ಜೈನ ಬಸದಿಗಳು, ಬೌದ್ಧ ವಿಹಾರಗಳು ಮತ್ತು ಸಿಖ್ ಗುರುದ್ವಾರಗಳಲ್ಲಿ ಸೇವೆ ಸಲ್ಲಿಸುತಿರುವ ಜೈನ ಅರ್ಚಕರು, ಬೌದ್ಧ ಧಮ್ಮಚಾರಿಗಳು ಮತ್ತು ಸಿಖ್ ಗ್ರಂಥಿಗಳಿಗೆ ಮಾಸಿಕ ಗೌರವಧನವನ್ನು ಒದಗಿಸಲು 2026-27ನೇ ಸಾಲಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ವೆಬ್‌ಸೈಟ್ https://sevaone.Karnataka.gov.in/services ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಧಾರವಾಡ ನಗರದ ನಾನಾ ಕಾಲೇಜ್, ದೇವಾಲಯಗಳಿಗೆ ಭೇಟಿ

ದೇವರ ಸೇವೆ, ಸ್ತುತಿ ಮಾಡಿ: ಶ್ರೀ ಸತ್ಯಾತ್ಮತೀರ್ಥ ಶ್ರೀ

■ ವಿಕ ಸುದ್ದಿಲೋಕ ಧಾರವಾಡ

ಭಗವಂತನ ಆಜ್ಞೆ ಮತ್ತು ಅನುಗ್ರಹವಿಲ್ಲದೇ ಯಾವುದೇ ಕೆಲಸ ನಡೆಯುವುದಿಲ್ಲ, ನಾವು ನೋಡುವ ಪ್ರತಿ ವಸ್ತುವಿನಲ್ಲಿ ಭಗವಂತನ ಸಾನ್ನಿಧ್ಯವನ್ನು ಕಾಣಬೇಕು. ಪ್ರತಿ ವಸ್ತುವೂ ಆತನ ಅಧೀನ ಎಂದು ಉತ್ತರಾದಿಮಠಾಧೀಶ ಶ್ರೀ ಸತ್ಯಾತ್ಮತೀರ್ಥರು ಹೇಳಿದರು.

ಇಲ್ಲಿನ ಹನುಮಂತನಗರದ ಶ್ರೀ ಕೃಷ್ಣ, ಶ್ರೀ ರಾಘವೇಂದ್ರ ಹಾಗೂ ಮಹಾಗಣಪತಿ ದೇವತಾ ಸಮುಚ್ಚಯಕ್ಕೆ ಭೇಟಿ ನೀಡಿ ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಿದರು.

ಪರ್ವತ, ನದಿ, ಸಮುದ್ರ ಹೀಗೆ ಪ್ರತಿ ವಸ್ತುವಿನ ಸೃಷ್ಟಿಕರ್ತ ಪರಮಾತ್ಮನೇ. ಇದರ ಅರಿವಿನ ಅನುಸಂಧಾನ ನಮ್ಮಲ್ಲಿರಬೇಕು. ಧರ್ಮವನ್ನು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ. ಧರ್ಮಾಚರಣೆಯಿಂದ ಭಯ ಬರುವುದಿಲ್ಲ, ಅನ್ಯಾಯ ಮಾಡಿದರೆ ವಾಮಮಾರ್ಗ ತುಳಿದರೆ ಭಯ ಖಚಿತ. ನಾವು ಮಾಡುವ ಕರ್ಮಗಳನ್ನು ದೇವರು ನೋಡುತ್ತಿರುತ್ತಾನೆ. ಆತನ ಭಯ ಅಗತ್ಯ. ಅಧರ್ಮ ಮಾಡದೇ ಸತ್ಕರ್ಮಗಳನ್ನು ಮಾಡಿದರೆ ಉದ್ಧಾರ ಸಾಧ್ಯ ಎಂದರು. ಎಲ್ಲರೂ ಸೇರಿ ಪರಮಾತ್ಮನ ಸೇವೆ ಹಾಗೂ ಸ್ತುತಿ ಮೂಲಕ ಜೀವನ ಸಾರ್ಥಕ ಪಡಿಸಿಕೊಳ್ಳಿ ಎಂದು ಆಶೀರ್ವದಿಸಿದರು.

ಇದೇ ವೇಳೆ ಮೂರು ದೇವರಿಗೆ ಆರತಿ ಮಾಡಿದ ಶ್ರೀಗಳ ನೆರೆದ ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಸಭಾ ವತಿಯಿಂದ ಶ್ರೀಗಳ ಪಾದಪೂಜೆ ನೆರವೇರಿಸಿ ಕಾಣಿಕೆ ಸಮರ್ಪಿಸಲಾಯಿತು. ಶ್ರೀ ಮಠದ ದಿವಾನರಾದ ಶಶಿಧರ ಆಚಾರ್ಯ, ಚಾತುರ್ಮಾಸ್ಯ ಸೇವಾ ಸಮಿತಿ ಕಾರ್ಯಾಧ್ಯಕ್ಷ ಆರ್. ಎಂ.ಕುಲಕರ್ಣಿ, ಪಂ.ಕೇಶವಾಚಾರ್ಯ ಕೆರೂರ, ಶ್ರೀ ಹರಿ ಕೊಪ್ಪರ ಇದ್ದರು.

ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣ ಸಭಾ ಅಧ್ಯಕ್ಷ ಚಂದ್ರಶೇಖರ ಪುರಾಣಿಕ, ಉಪಾಧ್ಯಕ್ಷ ನಾಗರಾಜ ಭಟ್, ಪದ್ಮನಾಭ ತಂತ್ರಿ, ಪ್ರಶಾಂತ ತಂತ್ರಿ , ಗುರುರಾಜ ಭಟ್, ಪ್ರಧಾನ ಅರ್ಚಕ ಶ್ರೀನಾಥ ಭಟ್,ಜನಾರ್ಧನ ಸರಳಾಯ, ಶಶಿಧರ, ಪದ್ಮನಾಭ ಉಡುಪಿ, ನಟರಾಜ ಉಪಾಧ್ಯೆ, ಕಾಳೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಶ್ರೀ ಗಳು ನಗರದ ಎಸ್‌ಡಿಎಂ ಎಂಜನಿಯರಿಂಗ್ ಕಾಲೇಜು, ಜೆಎಸ್‌ಎಸ್ ಕಾಲೇಜ್, ಹೊಸಯಲ್ಲಾಪುರದ ಶ್ರೀ ವೆಂಕಟೇಶ್ವರ ದೇವಸ್ಥಾನ, ಜಡ್‌ಜಿ ಹನುಮಂತ ದೇವಸ್ಥಾನ, ಮಹಿಷಿ ಟ್ರಸ್ಟ್‌ನ ಸೇವಾಶ್ರಮ ಹಾಗೂ ಕೊಪ್ಪಿ ಆರ್ಯ ಅಕ್ಷೋಭ್ಯತೀರ್ಥ ಸಂಸ್ಥಾನದ ಶ್ರೀ ಪಟ್ಟಾಭಿರಾಮ ದೇವಾಲಯಕ್ಕೆ ಭೇಟಿ ನೀಡಿ ಭಕ್ತರು ಹಾಗೂ ವಿದ್ಯಾರ್ಥಿಗಳಿಗೆ ಆಶೀರ್ವಚನ ನೀಡಿದರು.

ಧಾರವಾಡ ಹನುಮಂತನಗರದ ಶ್ರೀ ಕೃಷ್ಣ, ಶ್ರೀ ರಾಘವೇಂದ್ರ ಹಾಗೂ ಮಹಾಗಣಪತಿ ದೇವತಾ ಸಮುಚ್ಚಯದಲ್ಲಿ ಉತ್ತರಾದಿಮಠಾಧೀಶ ಶ್ರೀ ಸತ್ಯಾತ್ಮತೀರ್ಥರು ಆಶೀರ್ವಚನ ನೀಡಿದರು.

ಸೇವಾ ನಿವೃತ್ತ ಎಂಟು ಪೌರ ಕಾರ್ಮಿಕರ ಸನ್ಮಾನ

ಪೌರಕಾರ್ಮಿಕರ ಕಲ್ಯಾಣವೇ ಪಾಲಿಕೆ ಆಶಯ

ಹುಬ್ಬಳ್ಳಿ: ಅವಳಿ ನಗರದ ಸ್ವಚ್ಛತೆಯಲ್ಲಿ ಬದ್ಧತೆಯಿಂದ ಕೆಲಸ ಮಾಡುತ್ತಿರುವ ಪೌರಕಾರ್ಮಿಕರ ಆರೋಗ್ಯ, ಸುರಕ್ಷತೆ, ಆರ್ಥಿಕ ಭದ್ರತೆ ಮತ್ತು ಅವರ ಕುಟುಂಬ ಕಲ್ಯಾಣವೇ ಮಹಾನಗರ ಪಾಲಿಕೆಯ ಆಶಯವಾಗಿದೆ ಎಂದು ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ ಹೇಳಿದರು.

ನಗರದ ಕರ್ಕಿ ಕನ್ನಡ ಭವನದಲ್ಲಿ ಬುಧವಾರ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಗರ ಸ್ವಚ್ಛತೆ ಮತ್ತು ಸಾರ್ವಜನಿಕ ಆರೋಗ್ಯ ರಕ್ಷಣೆಯಲ್ಲಿ ಪೌರಕಾರ್ಮಿಕರು ಸಲ್ಲಿಸುತ್ತಿರುವ ಸೇವೆ ಅಮೂಲ್ಯವಾದದ್ದು. ಈ ಹಿನ್ನೆಲೆಯಲ್ಲಿ ಅವರ ಸೇವೆಯನ್ನು ಗುರುತಿಸಿ, ಗೌರವಿಸಲು ಮತ್ತು ಕಲ್ಯಾಣಕ್ಕಾಗಿ ಮುಂದಿನ ದಿನಗಳಲ್ಲಿಯೂ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪೌರಕಾರ್ಮಿಕರಿಗೆ ಪಾಲಿಕೆಯಿಂದ ನೀಡುತ್ತಿರುವ ಹಲವು ಸೌಲಭ್ಯಗಳ ಪಟ್ಟಿಯನ್ನು ವಿವರಿಸಿದರು. ನಿಯಮಾನುಸಾರ ಪೌರಕಾರ್ಮಿಕರಿಗೆ ಬಡ್ತಿ ನೀಡಲಾಗುತ್ತಿದೆ. ಪ್ರತಿ ತಿಂಗಳೂ 5ನೇ ತಾರೀಖಿನೊಳಗೆ ವೇತನ ಜಮಾ ಮಾಡಲಾಗುತ್ತಿದೆ. ಬ್ಯಾಂಕ್ ಅಕೌಂಟ್ ಮೂಲಕ ವೇತನ ಪಾವತಿಯಿಂದ 50 ಲಕ್ಷ ರೂ.ಗಳವರೆಗೆ ವಿವಿಧ ಸೌಲಭ್ಯಗಳು ದೊರೆಯುವಂತೆ ಮಾಡಲಾಗಿದೆ ಎಂದು ತಿಳಿಸಿದರು.

ಪೌರಕಾರ್ಮಿಕ ದಿನಾಚರಣೆ ಹಿನ್ನೆಲೆಯಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ 7 ಸಾವಿರ ರೂ. ವಿಶೇಷ ಭತ್ಯೆ ನೀಡಲಾಗಿದೆ. 21 ದಿನಗಳ ವಿಶೇಷ ರಜೆ ನಗದೀಕರಣ ಸೌಲಭ್ಯ ಕಲ್ಪಿಸಲಾಗಿದೆ. 31 ಪ್ರಕರಣಗಳಲ್ಲಿ ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮವನ್ನು ಪೌರಕಾರ್ಮಿಕರಿಂದಲೇ ಉದ್ಘಾಟಿಸಿದ್ದು ವಿಶೇಷವಾಗಿತ್ತು. ಸೇವಾ ನಿವೃತ್ತಿ ಹೊಂದಿದ 8 ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಉಪ ಆಯುಕ್ತರಾದ ಅನುರಾಧಾ ವಸ್ತ್ರದ, ವಿಜಯಕುಮಾರ್ ಆರ್., ಮುಖ್ಯ ಲೆಕ್ಕಾಧಿಕಾರಿ ಶಂಕರಾನಂದ್ ಬನಶಂಕರಿ, ಘನತ್ಯಾಜ್ಯ ವಿಭಾಗದ ಇಇ ಸಂತೋಷ ಯರಂಗಳಿ, ಹು-ಧಾ ಮಹಾನಗರ ಪಾಲಿಕೆ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಹೊನ್ನಪ್ಪ ದೇವಗಿರಿ, ಅಧಿಕಾರಿ ನೌಕರರ ಸಂಘದ ಅಧ್ಯಕ್ಷ ಪ್ರಸಾದ ಪೇರೂರು ಸೇರಿದಂತೆ ವಿವಿಧ ವಲಯಾಧಿಕಾರಿಗಳು ಭಾಗವಹಿಸಿದ್ದರು.

ಹುಬ್ಬಳ್ಳಿಯಲ್ಲಿ ಬುಧವಾರ ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಪೌರಕಾರ್ಮಿಕರು ಉದ್ಘಾಟಿಸಿದರು. ಪಾಲಿಕೆ ಆಯಕ್ತ ಡಾ.ರುದ್ರೇಶ ಘಾಳಿ, ಪೌರಕಾರ್ಮಿಕರ ಸಂಘದ ಮುಖಂಡರು ಹಾಗೂ ಇತರ ಅಧಿಕಾರಿಗಳು ಇದ್ದರು.

ಕಾರ್ಯಕ್ರಮದ ಸ್ಥಳದಲ್ಲೇ ಪ್ರತಿಭಟನೆ

ಪೌರಕಾರ್ಮಿಕ ದಿನಾಚರಣೆ ಬಹಿಷ್ಕರಿಸಿದ್ದ ಜಿಲ್ಲಾ ಎಸ್ಸಿಎಸ್ಟಿ ಪೌರಕಾರ್ಮಿಕ ಮತ್ತು ನೌಕರರ ಸಂಘದ ಸದಸ್ಯರು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ವಿವಿಧ ಬೇಡಿಕೆ ಈಡೇರಿಸ ಬೇಕೆಂದು ಹಕ್ಕೊತ್ತಾಯ ಮಂಡಿಸಿದರು. ಸಂಘದ ಅಧ್ಯಕ್ಷ ವಿಜಯ ಗುಂಟ್ರಾಳ ನೇತೃತ್ವದಲ್ಲಿ ಕೈಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಪ್ರತಿಭಟನೆ ನಡೆಯಿತು.

ಪುಸ್ತಕ ಲೋಕಾರ್ಪಣೆ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸೆ.24ರಂದು ಸಂಜೆ 6ಕ್ಕೆ ಡಾ.ಸಂತೋಷ ಹಾನಗಲ್ಲ ಅವರ ಸಂವಿಧಾನ ನುಡಿ ಸಂಹಿತೆ ಭಾರತದ ಸಂವಿಧಾನದಲ್ಲಿ ಭಾಷೆಗಳು ನಡೆದ ಹಾದಿ ಪುಸ್ತಕ ಲೋಕಾರ್ಪಣೆ ಸಮಾರಂಭವನ್ನು ಆಯೋಜಿಸಲಾ ಗಿದೆ. ಸಾಹಿತಿ ಡಾ.ರಾಘವೇಂದ್ರ ಪಾಟೀಲ ಕೃತಿ ಲೋಕಾ ರ್ಪಣೆ ಮಾಡುವರು. ಡಾ.ಪ್ರಜ್ಞಾ ಮತ್ತಿಹಳ್ಳಿ ಕೃತಿ ಪರಿಚಯ ಮಾಡುವರು. ಚಿಂತಕ ಡಾ.ಲೋಹಿತ್ ನಾಯ್ಕರ ಅಧ್ಯಕ್ಷತೆ ವಹಿಸುವರು.

ಆರೋಪಿಗೆ ಜೀವಾವಧಿ ಶಿಕ್ಷೆ

ಧಾರವಾಡ: ಕೊಲೆ ಪ್ರಕರಣದ ಆರೋಪಿಯನ್ನು ತಪ್ಪಿತಸ್ಥನೆಂದು ನಿರ್ಧರಿಸಿರುವ ಧಾರವಾಡದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಜರೀನಾ, ಆರೋಪಿ ಕನ್ನೆಯಪ್ಪನಿಗೆ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಸರಕಾರದ ಪರವಾಗಿ ಸರಕಾರಿ ಅಭಿಯೋಜಕ ಪ್ರಕಾಶ್ ಎಸ್. ಸುಂಕದ ವಾದ ಮಂಡಿಸಿದ್ದರು. ಧಾರವಾಡದ ಹೋಟೆಲ್‌ವೊಂದರಲ್ಲಿ ಫಕ್ಕಿರೇಶ ಪ್ಯಾಟಿ ಕುಕ್ ಆಗಿ ಹಾಗೂ ಆರೋಪಿ ಕನ್ನೆಯಪ್ಪ ಸಪ್ಲಾಯರ್ ಆಗಿದ್ದರು. ಇಬ್ಬರೂ ಒಂದೇ ಶೆಡ್‌ನಲ್ಲಿ ವಾಸವಾಗಿದ್ದರು.

ಹೋಟೆಲ್‌ನಲ್ಲಿ ಫಕ್ಕಿರೇಶ ರೊಟ್ಟಿ ಬೇಗನೆ ಮಾಡಿಕೊಡದಿರುವುದು ಸೇರಿದಂತೆ ಇತರೆ ವಿಚಾರವಾಗಿ ಇಬ್ಬರ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಇದೇ ದ್ವೇಷದ ಹಿನ್ನೆಲೆಯಲ್ಲಿ 2024ರ ಫೆ.7ರಂದು ಮಧ್ಯರಾತ್ರಿ ಶೆಡ್‌ನ ಹೊರಗೆ ಫಕ್ಕಿರೇಶನೊಂದಿಗೆ ಜಗಳ ತೆಗೆದ ಕನ್ನೆಯಪ್ಪ, ಕಬ್ಬಿಣದ ಆ್ಯಂಗಲ್ ಪಟ್ಟಿಯಿಂದ ಹೊಡೆದು ಮಾರಣಾಂತಿಕವಾಗಿ ಗಾಯಗೊಳಿಸಿದ ಹಿನ್ನೆಲೆಯಲ್ಲಿ ಆತ ಸಾವಿಗೀಡಾಗಿದ್ದ. ಪ್ರಕರಣದ ತನಿಖೆ ನಡೆಸಿದ ಧಾರವಾಡ ಶಹರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ವಿಶ್ವನಾಥ ಚೌಗ್ಲೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

Nanjappa Hospitals | Shri Bhanji D Khimji Lifeline Hospital
ಕ್ಯಾನ್ಸರ್ ಚಿಕಿತ್ಸೆಯಲ್ಲಿ ನಂಬಿಕೆಯ ಹೆಸರು
ಈಗ ಹುಬ್ಬಳ್ಳಿಯಲ್ಲಿ
ಸಮಾಲೋಚನೆ
ಕ್ಯಾನ್ಸರ್ ಪತ್ತೆಯಾದ ರೋಗಿಗಳಿಗೆ
ಎರಡನೇ ಅಭಿಪ್ರಾಯಕ್ಕಾಗಿ
ಅಪಾಯಿಂಟ್ಮೆಂಟ್ ಬುಕ್ ಮಾಡಿ
ಸೋಮವಾರದಿಂದ ಶುಕ್ರವಾರದವರೆಗೆ
ಡಾ|| ಪ್ರಸಾದ್ ಗುನಾರಿ
ಸೀನಿಯರ್ ಮೆಡಿಕಲ್ ಅಂಕೋಲಾಜಿಸ್ಟ್
15+ ವರ್ಷಗಳ ಕ್ಯಾನ್ಸರ್ ಚಿಕಿತ್ಸಾ ಅನುಭವ
ಕೀಮೋಥೆರಪಿ | ಇಮ್ಯುನೊಥೆರಪಿ | ಟಾರ್ಗೆಟೆಡ್ ಥೆರಪಿ
ಶ್ರೀ ಭಾಣಜಿ ಡಿ. ಖಿಮಜಿ ಲೈಫ್ ಲೈನ್ ಆಸ್ಪತ್ರೆ ಹೊಸ ಬಸ್ ನಿಲ್ದಾಣದ ಎದುರು, ಗೋಕುಲ್ ರಸ್ತೆ, ಹುಬ್ಬಳ್ಳಿ. | +91 63 66 23 6147